# ಭುವಿಯ ಒಡಲ ಬಗೆದು...

'ನಾವು ಭೂಮಿಯ ಮೇಲ್ಮೈಯನ್ನು ಕೆರೆದು ಐದು ಸಾವಿರ ವರ್ಷಗಳಿಂದ ಬದುಕಿದ್ದೇವೆ; ಕೆಲ ಧನದಾಹಿಗಳು ಭೂಮಿಯ ಅಂತರಾಳವನ್ನು ಬಗೆದು ಕೆಲವೇ ವರ್ಷಗಳಲ್ಲಿ ಜಗತ್ತನ್ನು ನಾಶಮಾಡುತ್ತಿದ್ದಾರೆ.'

ವಿಜ್ಞಾನದ ಸಿದ್ಧಿಯಾದ ಉಪಗ್ರಹಗಳು ಕಳುಹಿಸುವ ಚಿತ್ರಗಳನ್ನು ನೋಡಿದಾಗ ಭೂಮಿ ಅತ್ಯಂತ ಸುಂದರವಾಗಿ ಕಾಣುತ್ತದೆ. ಈ ಸುಂದರ ಭುವಿಯ ಮೇಲೆ ವಾಸಿಸುವ ನಾವು ಅದೃಷ್ಟವಂತರು. ಅದಕ್ಕೆ ನಾವು ಅದೆಷ್ಟು ಋಣಿಗಳಾಗಿದ್ದರೂ ಸಾಲದು. ಅದು ತನ್ನ ಜಲ ನೆಲಗಳಲ್ಲಿ ಜೀವಿಸುವ ದೃಶ್ಯ-ಅದೃಶ್ಯ ಜೀವಿಗಳನ್ನು ಲಕ್ಷಾಂತರ ವರ್ಷಗಳಿಂದ ಸಾಕುತ್ತಾ ಬಂದಿದೆ. ದೃಶ್ಯ ಜೀವಿಗಳು ಭುವಿಯ ಋಣವನ್ನು ಕೃತಜ್ಞತೆಯಿಂದ ನೆನೆಯುತ್ತಾ ತಮ್ಮ ಮಿತಿಯ ಒಳಗೆ ಜೀವಿಸುತ್ತಾ ಬಂದಿವೆ- ಮಾನವ ಜೀವಿಯೊಂದನ್ನು ಹೊರತುಪಡಿಸಿ. ಅದೃಶ್ಯ ಜೀವಿಗಳಂತು ತಮ್ಮ ನಿಶ್ಶಬ್ದ ದುಡಿಮೆಯಿಂದ ಭುವಿಗೆ ಮತ್ತು ಅದರ ಸಹ ಜೀವಿಗಳಿಗೆ ಉಪಕರಿಸುತ್ತಾ ಬಂದಿವೆ. ಬಹುಪಾಲ ಭುವಿಯ ಜೀವಿಗಳು ಇತರ ಜೀವಿಗಳ ಬದುಕನ್ನು ಹತ್ತಿಕ್ಕುವಂಥ ಕೆಲಸವನ್ನು ಮಾಡುತ್ತಿಲ್ಲ. ಆದರೆ ಮಾನವ ಜೀವಿ?

ಮಾನವ ಜೀವಿಯೂ ಮೊನ್ನೆ ಮೊನ್ನೆಯವರೆಗೂ ಇತರೆ ಸಹಜೀವಿಗಳ ಜೊತೆ ಸಹಬಾಳ್ವೆ ಮಾಡುತ್ತಲೇ ಬಂದಿದ್ದ. ಏಕೆಂದರೆ ಅವನ ಆಸೆಗಳು ಮಿತವಾಗಿದ್ದವು. ಇತರೆ ಸಹಜೀವಿಗಳೊಡನೆ ಸಹಜೀವನ ನಡೆಸುತ್ತಾ ತನ್ನ ಮಿತಿಯರಿತು ಅವನು ಬದುಕಿದ್ದ. ಬುದ್ಧನಂಥ ಜೀವಪರ ಚಿಂತಕರು ಮಾನವನ ಜೀವಿತದ ಉದ್ದೇಶದ ಗುರಿ ಮತ್ತು ಸಾಫಲ್ಯ ಈಡೇರಿಕೆಯಲ್ಲಿ ಆಸೆಯ ಸ್ಥಾನವೆಂಥದ್ದೆಂಬುದನ್ನು ನಿರೂಪಿಸಿ ಅವನ ದುರಾಸೆಯನ್ನು ಅಂಕೆಯಲ್ಲಿಟ್ಟಿದ್ದರು. ಬದುಕಿನ ರುಚಿಯನ್ನು ಅನುಭವಿಸಲು ಸಾಧ್ಯವಾಗುವುದು ಇತರರೊಡನೆ ಹಂಚಿಕೊಂಡು ತಿಂದಾಗ ಮಾತ್ರ. ಇತರರು ಪಡುವ ಆನಂದವನ್ನು ಕಂಡಾಗ ಮತ್ತು ಆ ಆನಂದಕ್ಕೆ ಕಿಂಚಿತ್ತಾದರೂ ತಾನು ಕಾರಣನೆಂಬ ಅನುಭವವಾದಾಗ ಬದುಕಿನ ಅರ್ಥವಾಗುತ್ತದೆ. ಆದರೆ ಮಿತಿ ಮೀರಿದ ಆಸೆ ಕಬಳಿಸುತ್ತಾ ಸಾಗುತ್ತದೆ, ಕೇವಲ ಮಾನವಜೀವಿಗಳನ್ನು ಮಾತ್ರವಲ್ಲ, ಇತರ ಸಹಜೀವಿಗಳ ಬಾಳನ್ನು ಸಹ ನುಂಗಲು ಯತ್ನಿಸುತ್ತದೆ. ಈಗ ಆಗಿರುವುದು ಹಾಗೆಯೇ. ಅದರ ಪರಿಣಾಮವಾಗಿ ಭುವಿಯ ಮೇಲೆ ಇಂದು ಅವನು ನಡೆಸಿರುವ ಅತ್ಯಾಚಾರ; ಇತರ ಸಹಜೀವಿಗಳ ಬದುಕಿನೊಡನೆ ನಡೆಸಿರುವ ಕ್ರೌರ್ಯಗಳು ಕಾಣತೊಡಗಿವೆ.

ನಮ್ಮ ಪೂರ್ವಿಕರು ನಮಗಿಂತ ತುಸು ಹೆಚ್ಚಾಗಿಯೇ ಪ್ರಕೃತಿಯ ಲಯವನ್ನು ಅರ್ಥ ಮಾಡಿಕೊಂಡಿದ್ದರೆಂದು ತೋರುತ್ತದೆ. ಏಕೆಂದರೆ, ಅವರು ಪ್ರಕೃತಿಗೆ ತೀರ ಹತ್ತಿರವಾಗಿದ್ದು, ಅದರ ಋತುಲಯ ಚಕ್ರ ಗತಿಗಳನ್ನು ಗ್ರಹಿಸಿದ್ದರು. ಅದರ ಚಕ್ರ ಗತಿಗೆ ಭಂಗ ಬಾರದಂತೆ ತಾವು ನಡೆದುಕೊಂಡರೆ ಅದು ನಮ್ಮನ್ನು ಸಾಕಿ ಬೆಳೆಸುತ್ತದೆ ಎಂಬ ಅನುಭವ ಅವರಿಗಾಗಿತ್ತು. ತಮಗೆ ಅಗೋಚರವಾದ ಭುವಿಯ ಅಂತರಾಳಕ್ಕೆ ಲಗ್ಗೆ ಇಡುವ ಸಾಹಸಕ್ಕೆ ಅವರು ಹೋಗಲಿಲ್ಲ. ಅವರಿಗೆ ಅದು ತಾಯಿ, ಅವಳ ಹಾಲು ಕುಡಿದು ಬೆಳೆದವರು. ಹಾಲು ಕುಡಿದ ಅಮ್ಮನ ಕೆಚ್ಚಲಿಗೆ ಕೈ ಹಾಕಬಾರದೆನ್ನುವ ವಿವೇಕ ಅವರಲ್ಲಿತ್ತು. ಆದರೆ ಇಂದಿನ ದುರಾಸೆಯ ಮಾನವ ಹಾಲು ನೀಡುವ ಕೆಚ್ಚಲನ್ನೇ ಕೊಚ್ಚಿಹಾಕಿ, ಮುಂದೆ ಹಾಲೇ ಇಲ್ಲದಂಥ ಸ್ಥಿತಿ ನಿರ್ಮಾಣ ಮಾಡ ಹೊರಟಿರುವುದು ದುರಂತವಲ್ಲದೆ ಮತ್ತೇನು?

ಈ ಭೂಮಿಯ ಮೇಲ್ಪದರವನ್ನೇ ನಂಬಿ ಅಸಂಖ್ಯಾತ ಜೀವಿಗಳು ಲಕ್ಷಾಂತರ ವರ್ಷಗಳಿಂದ ಬದುಕಿ ಬಾಳಿವೆ. ಈ ಮೇಲ್ಪದರದಲ್ಲಿ ಅಂಥ ಸತ್ವವಿದೆ. ಈ ಸತ್ವ ನಿರ್ಮಾಣ ನೂರಿನ್ನೂರು ವರ್ಷಗಳಲ್ಲಿ ಆಗಿರುವಂಥದ್ದಲ್ಲ; ಆಗುವಂಥದ್ದೂ ಅಲ್ಲ. ಈ ಸತ್ವ ಸೃಷ್ಟಿಯಾಗಲು ಲಕ್ಷಾಂತರ ವರ್ಷಗಳೇ ಹಿಡಿದಿವೆ. ಈ ನಿರ್ಮಾಣ ಕ್ರಿಯೆಯಲ್ಲಿ ಮರಗಿಡಗಳ ಜೊತೆಗೆ ಸೂಕ್ಷ್ಮಾತಿ ಸೂಕ್ಷ್ಮ ಕ್ರಿಮಿ ಕೀಟಾದಿ ಜೀವಾಣುಗಳು ಅವಿರತವಾಗಿ ದುಡಿದಿವೆ. ಇಂಥ ದುಡಿಮೆಯ ಸತ್ವವನ್ನು ಮಾನವ ತನ್ನ ಬದುಕಿಗೆ ಆಶ್ರಯಿಸಿ ಸಾವಿರಾರು ವರ್ಷಗಳಿಂದ ಬದುಕು ಮಾಡಿದ್ದಾನೆ.

ಆದರೆ ನೂರಿನ್ನೂರು ವರ್ಷಗಳ ಮಾನವನ ದುರಾಸೆ ಭೋಗಲಾಲಸೆಗಳು ಮಿತಿ ಮೀರಿವೆ. ಅದರಿಂದಾಗಿ ಅವನು ಭುವಿಯ ಅಂತರಾಳವನ್ನು ಬಗೆದು ಅದರ ಅಮೂಲ್ಯ ಸಂಪತ್ತನ್ನು ಸ್ವಾರ್ಥಕ್ಕಾಗಿ ಕಬಳಿಸುತ್ತಿದ್ದಾನೆ. ಇದರಿಂದ ಭೂಮಿಯ ಮೇಲ್ಮೈ ಸಂಪತ್ತು ನಾಶವಾಗಿ ಬಂಜರಾಗುತ್ತಿದೆ. ಮುಂದಿನ ಅನೇಕ ತಲೆಮಾರುಗಳು ಅನ್ನ ಆಹಾರಗಳನ್ನು ಬೆಳೆಯಲಾಗದಂಥ ಸ್ಥಿತಿ ನಿರ್ಮಾಣವಾಗುತ್ತದೆ. ಜೊತೆಗೆ ಸಸ್ಯ ಪ್ರಾಣಿ ಸಂಕುಲಗಳು ನಾಶವಾಗಿ ಭುವಿಯ ಸಮತೋಲನ ತಪ್ಪುವಂತಾಗುತ್ತದೆ.

■ ಶಿಕಾಕು

## ಮಾತೇ ಮುತ್ತು

★ ಪ್ರೇಮವನ್ನು ಹಾಗೂ ಕೆಮ್ಮನ್ನು ಬಚ್ಚಿಡಲು ಸಾಧ್ಯವಿಲ್ಲ!

-ಜಾರ್ಜ್ ಹರ್ಬರ್ಟ್

★ ನದಿಗಳು ಪ್ರೇಮದ ಬಾಯಾರಿಕೆಯನ್ನು ಇಂಗಿಸಲಾರವು; ಪ್ರವಾಹಗಳು ಪ್ರೇಮವನ್ನು ಕೊಚ್ಚಿ ಹಾಕಲಾರವು.

-ಸಾಲೊಮನ್

★ ಪ್ರೇಮಕ್ಕೆ ಗೊತ್ತಿಲ್ಲದ ಕಳ್ಳದಾರಿಗಳಿಲ್ಲ!

-ಜರ್ಮನ್ ಗಾದೆ

★ ಸಂಸಾರ ಎನ್ನುವ ವೀಣೆಗೆ ಪ್ರೀತಿಯೆನ್ನುವ ಉಗುರಿನಿಂದ ಬಾರಿಸಿದರೆ ಸುಮಧುರ ಸಂಗೀತ ಬರುತ್ತದೆ. ಸಿಟ್ಟು ದ್ವೇಷ ಅಹಂಕಾರ ಎನ್ನುವ ಒನಕೆಯಿಂದ ಬಾರಿಸಿದರೆ ಸಂಸಾರದ ವೀಣೆಯೇ ಮುರಿದು ಹೋಗುತ್ತದೆ.

-ಸಂಚಿ ಹೊನ್ನಮ್ಮ

★ ಮಹಾಭಾರತ ಒಂದು ನಾಗರಿಕತೆಯ ಇಳಿಗಾಲವನ್ನು, ಒಂದು ಮಹಾಯುಗದ ಅಂತ್ಯವನ್ನು ವರ್ಣಿಸಿದರೆ; ರಾಮಾಯಣ ಪ್ರಾತಸ್ಸಂಧ್ಯೆಯ ಏರುವೆಗಾಲವನ್ನು ವರ್ಣಿಸುತ್ತದೆ.

-ಪು.ತಿ.ನ.

★ ಅಹಂಕಾರಿ ಸದಾ ಸಂಶಯದ ಸ್ವಭಾವದವನಾಗಿರುತ್ತಾನೆ.

-ಶಿವರಾಮ ಕಾರಂತ

★ ಹರಿಹರನ 'ಗಿರಿಜಾ ಕಲ್ಯಾಣ' ಒಂದು ಪುರಾಣ ಕಥೆ ಮಾತ್ರವಲ್ಲ. ಶಕ್ತಿ ಸ್ವರೂಪಳಾದ ಗಿರಿಜೆ ವಿಜ್ಞಾನದ ಸಂಕೇತ. ನೃತ್ಯದ ಗುರುವಾದ ಶಿವ ಕಲೆಯ ಸಂಕೇತ. ಅವರ ಕಲ್ಯಾಣ ಕೇವಲ ಗಂಡು ಹೆಣ್ಣಿನ ವಿವಾಹವಲ್ಲ, ವಿಜ್ಞಾನ ಮತ್ತು ಕಲೆಗಳ ಮಹಾಸಂಗಮ.

-ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

★ ಖ್ಯಾತಿ ಎನ್ನುವುದು ಎಂದೂ ನೀಗದ ಬಾಯಾರಿಕೆ. ಅಗಸ್ತ್ಯ ಋಷಿ ಸಮುದ್ರ ಹೀರಿದರೂ ಶಾಂತರಾಗಲಿಲ್ಲ.

-ರವೀಂದ್ರನಾಥ ಠಾಕೂರ್

★ ಆತ್ಮಗೌರವದ ರಕ್ಷಣೆ ನಮ್ಮ ಮೊದಲ ಧರ್ಮ. ಆತ್ಮದ ಹತ್ಯೆ ಮಾಡಿ ಸ್ವರ್ಗ ಸಿಕ್ಕುವುದಾದರೂ ಅದು ನರಕ.

-ಬಂಕಿಮಚಂದ್ರ

★ ಪರಿಸ್ಥಿತಿಗಳ ಸುಳಿವಿನಲ್ಲಿ ಸಿಕ್ಕಿರುವ ಮನುಷ್ಯ, ಪರಿಸ್ಥಿತಿಗಳನ್ನು ಬಿಡುವುದರಿಂದ ಬಚಾವಾಗಬಲ್ಲ.

-ಅರಿಸ್ಟಾಟಲ್

★ ಜಗತ್ತಿನಲ್ಲಿ ದುರ್ಬಲ ಹಾಗೂ ದರಿದ್ರನಾಗುವುದು ಪಾಪ.

-ವಿನೋಬಾ ಭಾವೆ

★ ಕಣ್ಣೀರು ಒರೆಸುವವನಿಗಿಂತ, ನಾವು ಕಣ್ಣೀರು ಹಾಕದಂತೆ ನೋಡಿಕೊಳ್ಳುವವನೇ ನಿಜವಾದ ಸ್ನೇಹಿತ.

-ಅನಾಮಿಕ

★ ಕೋಪವೆಂಬುದು ಅತ್ಯಂತ ಪ್ರಬಲ ಆಮ್ಲ. ಅದು ಬೀಳುವ ಜಾಗ ಸುಡುವುದಕ್ಕಿಂತ, ಅದು ಇರುವ ಜಾಗವೇ ಹೆಚ್ಚು ಸುಡುತ್ತದೆ.

-ಕ್ಲಿಂಟನ್

★ ಎಲ್ಲರಿಗಿಂತ ತಾನೇ ಜಾಣ ಎಂದು ಭಾವಿಸುವವನು ಸುಲಭವಾಗಿ ಮೋಸ ಹೋಗುತ್ತಾನೆ!

-ಈಸೋಪ